2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತ ಪ್ರದನ್ಯಾ., ದಂಡಾಧಿಕಾರಿಗಳವರ
ನ್ಯಾಯಾಲಯ, ಕೃಷ್ಣರಾಜಪೇಟೆ

**ಸಿ.ಸಿ. ನಂ. 281/2019**

| | | |
|---|---|---|
| ಸಾಕ್ಷಿದಾರರ ಹೆಸರು | ಕೀರ್ತನಾ | ಪ್ರಾಸ – 3 ಚಾ.ಸಾ - 5 |
| ತಂದೆಯ/ಗಂಡನ ಹೆಸರು | ರಾಜುಗೌಡ | |
| ವಯಸ್ಸು | 17 ವರ್ಷ | |
| ವೃತ್ತಿ | ವಿದ್ಯಾರ್ಥಿ | |
| ವಾಸ ಸ್ಥಳ | ಕೈಗೊನಹಳ್ಳಿ ಗ್ರಾಮ | |

ಸಾಕ್ಷಿಗೆ ದಿನಾಂಕಃ **05.06.2024** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎ. ಪಿ. ಪಿ. ಯವರಿಂದ,

ದಿನಾಂಕ 30.12.2018 ಸಂಜೆ 5.30 ಗಂಟೆಗೆ ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ನಾನು, ಚಾಸಾ-2 ಹಾಗೂ 6 ರಮರ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ, ಆರೋಪಿತರು ಚಾಸಾ-1 ರವರ ಜೊತೆ ಮನೆಯ ಒಳಗಡೆ ಹೋಗಬೇಡ ಎಂದು ತಡೆದು ಜಗಳ ಮಾಡುತ್ತಿದ್ದರು. ಆ ಸಂದರ್ಭದಲ್ಲಿ 1 ನೇ ಆರೋಪಿ ದೊಣ್ಣೆಯಿಂದ ಚಾಸಾ-1 ರವರ ಬಲಗಾಲಿಗೆ ಹೊಡೆದು ನೋವುಂಟು ಮಾಡಿದರು. 2 ನೇ ಆರೋಪಿ ಕುಡುಗೊಲಿನಿಂದ ಚಾಸಾ-1 ರವರ ಎಡಕೈಗೆ ಹೊಡೆದು ನೋವುಂಟು ಮಾಡಿದರು. 12 ನೇ ಆರೋಪಿ ಚಾಸಾ1 ರವರ ಎದೆಗೆ ಗುದ್ದಿ ನೋವುಂಟು ಮಾಡಿದರು.

ನಂತರ 2 ನೇ ಹಾಗೂ 11 ನೇ ಆರೋಪಿತರು 1 ನೇ ಆರೋಪಿಗೆ ಚಾಸಾ-1 ರವರನ್ನು ಕೊಲೆ ಮಾಡುವುದಾಗಿ ಕುಮ್ಮಕ್ಕು ಕೊಟ್ಟಾಗ 11 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಲು ಪ್ರಯತ್ನ ಮಾಡಿರುತ್ತಾರೆ. ನಂತರ ಚಾಸಾ-1 ರವರು ಕೆಳಕ್ಕೆ ಬಿದ್ದ ತಕ್ಷಣ ಚಾಸಾ-1 ರವರು ಕಿರುಚಿಕೊಂಡ ಮೇರೆಗೆ ನಾನು ಚಾಸಾ-2 ಹಾಗೂ 6 ರವರು ಸಹಾಯ ಮಾಡಲು ಹೋದಾಗ, 11, 12 ಹಾಗೂ 3 ನೇ ಆರೋಪಿತರು ಚಾಸಾ-2 ರವರನ್ನು ಕೆಳಕ್ಕೆ ತಳ್ಳಿ ಕಾಲಿನಿಂದ ತುಳಿದು ಹಲ್ಲೆ ಮಾಡಿದರು.

ನಂತರ 1 ನೇ ಆರೋಪಿ ಚಾಸಾ-2 ರವರಿಗೆ ಜಮೀನು ಹಾಗೂ ಮನೆ ಹತ್ತಿರ ಬಂದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಅಲ್ಲೆ ಇದ್ದ ಚಾಸಾ-3 ಹಾಗೂ 4

ರವರು ಬಂದು ಜಗಳವನ್ನು ಬಿಡಿಸಿ ಚಾಸಾ-1 ಹಾಗೂ 2 ರವರಿಗೆ ಚಿಕಿತ್ಸೆ ಕೊಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರದಲ್ಲಿ ಕೆ.ಆರ್.ಪೇಟೆ ಪೊಲೀಸ್ ಠಾಣೆಯಲ್ಲಿ ಸದರಿ ವಿಚಾರವಾಗಿ ದೂರನ್ನು ದಾಖಲು ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ 1, 3 ಹಾಗೂ 12 ನೇ ಆರೋಪಿತರನ್ನು ಗುರುತಿಸಿದ್ದು, 2 ಹಾಗೂ 11 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 4 ನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ವಿಚಾರವನ್ನು ಪೊಲೀಸರಿಗೆ ಹೇಳಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಾಯ್.ಜಿ. ವಕೀಲರಿಂದ,

ನಾನು ಡಿಪ್ಲೊಮಾ ವ್ಯಾಸಾಂಗ ಮಾಡುತ್ತಿದ್ದೇನೆ. ಘಟನೆಯಾದ ಸಂದರ್ಭಲ್ಲಿ 7 ನೇ ತರಗತಿಯಲ್ಲಿ ಓದುತ್ತಿದ್ದೆ. 11 ನೇ ಆರೋಪಿ ನನ್ನ ಚಿಕ್ಕಮ್ಮ ಎಂದರೆ ಸರಿ. ಉಳಿದ ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿ. 1 ನೇ ಆರೋಪಿಯನ್ನು ಮನೆ ಅಳಿಯನಾಗಿ ಮದುವೆ ಮಾಡಿಸಲಾಗಿರುತ್ತದೆ. ನನ್ನ ತಾತನ ಆಸ್ತಿಯನ್ನು 1 ನೇ ಆರೋಪಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು 1 ನೇ ಆರೋಪಿ ಆಸ್ತಿಗಳನ್ನು ಮೊಸದಿಂದ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆಗಿರುವ ಘಟನೆಯನ್ನು ನೋಡಿರುತ್ತೇನೆ. ಚಾಸಾ-2 ರವರು ಹೇಳಿಕೊಟ್ಟ ಮೇರೆಗೆ ನಾನು ಸಾಕ್ಷಿ ಹೇಳುತ್ತಿರುವುದಿಲ್ಲ. ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಚಾಸಾ-2 ರವರ ಮಾತಿನ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಲಾಟೆ ಆಗಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2, 6 ಹಾಗೂ ಇನ್ನಿತರು ಸಾಕ್ಷಿಗಳ ಜೊತೆ ಶಾಮಿಲಾಗಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ .**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ .**